## ಆಗಲಿ, ಸಂತೋಷ...



ನಮ್ಮ ಊರಿನ ಸುಬ್ರಹ್ಮಣ್ಯ ಸ್ವಾಮಿ ದೇವಾಲಯದ ಅರ್ಚಕರಾದ ಸಾಮಾ ಭಟ್ಟರು ಎಲ್ಲರನ್ನೂ ಆಕರ್ಷಿಸುವುದರಲ್ಲಿ ಬಲು ಜಾಣರು. ಆದರೆ ಅವರದು 'ಆಗಲಿ... ಆಗಲಿ... ಸಂತೋಷ... ಸಂತೋಷ...' ಎಂಬ ವಾಡಿಕೆಯ ನುಡಿ ಇತ್ತು.

ಒಮ್ಮೆ ನನ್ನ ಸ್ನೇಹಿತ ದುಃಖದಲ್ಲಿದ್ದಾಗ ನಾನು ಅವನನ್ನು ಆ ದೇವಾಲಯಕ್ಕೆ ಕರೆದೊಯ್ದೆ. 'ಏನಪ್ಪಾ ಈ ನಡುವೆ ಕಾಣಲೇ ಇಲ್ಲಾ... ಮನೇಲಿ ಎಲ್ಲರೂ ಸೌಖ್ಯವೋ?' ಎಂದು ಈಗಾಗಲೇ ಪರಿಚಯ ಇದ್ದವರಂತೆ ಸಾಮಾ ಭಟ್ಟರು ಮಾತನಾಡಿದಾಗ ನನ್ನ ಸ್ನೇಹಿತನಿಗೆ ಒಂಥರಾ ಖುಷಿ. ಆದರೆ ಅವರು ತಮ್ಮ ದುಃಖದ ಸಂಗತಿಯನ್ನು ಹೇಳಿಕೊಂಡರು. 'ಏನಿಲ್ಲಾ ಸ್ವಾಮಿ, ನಮ್ಮ ಶ್ರೀಮತಿ ಹೋಗಿಬಿಟ್ರು...' ಎಂದು ಅರ್ಧ ಹೇಳುವಷ್ಟರಲ್ಲೇ 'ಆಗಲಿ... ಆಗಲಿ... ಸಂತೋಷ... ಸಂತೋಷ...' ಎಂಬ ವಾಡಿಕೆಯ ಮಾತನ್ನು ಆಡಿಯೇ ಬಿಟ್ಟರು. ನನ್ನ ಸ್ನೇಹಿತನಿಗೆ ಪಿತ್ತ ನೆತ್ತಿಗೇರಿತ್ತು.

**ವಿ.ಎಸ್. ಸತ್ಯನಾರಾಯಣ ರಾವ್**

## 'ವಡೀಬ್ಯಾಡ...'

ಒಮ್ಮೆ ನಮ್ಮ ಮನೆಗೆ ಅತಿಥಿಗಳು ಬಂದಿದ್ದರು. ಅವರದ್ದು ಪಕ್ಕಾ ಉತ್ತರ ಕರ್ನಾಟಕದ ಭಾಷೆ. ಮಂಡಕ್ಕಿ ಉಸುಳಿ, ಈರುಳ್ಳಿ ಭಜಿ ಮಾಡಿದ್ದೆ. ಎಲ್ಲರಿಗೂ ತಟ್ಟೆಯಲ್ಲಿ ಹಾಕಿಕೊಟ್ಟು ಟೀ ಮಾಡಲು ಅಡುಗೆ ಮನೆಗೆ ಬಂದೆ. ಅವರ ಜೊತೆಯಲ್ಲಿ ಬಂದಿದ್ದ ಚಿಕ್ಕ ಮಗು 'ಮಮ್ಮೀ, ನಂಗ್ ವಡೀಬ್ಯಾಡ, ವಡೀಬ್ಯಾಡ' ಅಂತಾ ಒಂದೇ ಸಮ ಕೂಗುತ್ತಿದ್ದ. ಅವರಮ್ಮ ತಿನ್ನು ಅಂತಾ ಗದರುತ್ತಿದ್ದಳು. ಪಾಪ! ಚಿಕ್ಕ ಮಗೂ ತಿನ್ನಲಿಲ್ಲದಕ್ಕೆ ಯಾಕೆ ಹೊಡಿತಾರೋ, ಎಂದುಕೊಳ್ಳುತ್ತಾ ಹೊರಗೆ ಬಂದು, 'ಮಗೂನ ಹೊಡೆಯಬೇಡಿ, ಅದಕ್ಕೇನು ಬೇಕೋ ಅದನ್ನೇ ತಿನ್ನಲಿ' ಎಂದಾಗ ಅಲ್ಲಿದ್ದವರೆಲ್ಲರೂ ನಗಾಡತೊಡಗಿದರು.'ಇಲ್ರೀ ಅಕ್ಕಾರ, ಅವ್ನಿಗೆ ಚುರುಮುರಿ ಸಾಕಂತೆ, ವಡೀ ತಿನ್ನೋವಲ್ಲಾ' ಅಂತಾ ಅವನ ತಟ್ಟೆಯಲ್ಲಿದ್ದ ವಡೆಗಳನ್ನು ಒಳಗಿಟ್ಟು ಬಂದಾಗ ಭಾಷಾ ಅವಾಂತರಕ್ಕೆ ನಗುಬಂತು.



**ನಳಿನಿ ಟಿ. ಭೀಮಪ್ಪ**